**ದಿನಾಂಕಃ 24/01/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು: ಎದುರುದಾರರ ಪರ ಶ್ರೀ. ಬಿ.ಎನ್.ಹೆಚ್. ವಕೀಲರಿಂದಃ**

1. ನಿಪಿ.23 ರಲ್ಲಿ ಯಶೋಧಾ ಎಂದು ಮಾತ್ರ ಇದೆ ಎಂದರೆ, ಸಾಕ್ಷಿಯು ನಾನು ಈಗಲೂ ಆಸ್ಪತ್ರೆಯಲ್ಲಿ ತೋರಿಸುತ್ತಿದ್ದೇನೆ ಎಂದು ನುಡಿಯುತ್ತಾರೆ. ನಿಪಿ.24 ರಲ್ಲಿ ಯಾವ ಆಸ್ಪತ್ರೆ ಮತ್ತು ಯಾವ ವೈದ್ಯರ ಸಹಿ ಇಲ್ಲ ಎಂದರೆ ಸರಿಯಲ್ಲ. ನನ್ನ ಅರ್ಜಿಯಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತು. ನಾನು 6-7 ವರ್ಷಗಳಿಂದ ಶಾನುಭೋಗನಹಳ್ಳಿ ಯ ಬಾಡಿಗೆ ಮನೆಯಲ್ಲಿ ವಾಸವಾಗಿದ್ದೆನೆ. ಮೊದಲು ನಾನು ತಂದೆಯ ಮನೆಯಲ್ಲಿ ಇದ್ದೆ. ನನ್ನ ಹೆಸರಿನಲ್ಲಿ ಶಾನುಭೋಗನಹಳ್ಳಿ ಯಲ್ಲಿ ಒಂದು ಸ್ವಂತ ಮನೆ ಇದೆ ಎಂದರೆ ಸರಿಯಲ್ಲ. ನಾನು ನನ್ನ ಅರ್ಜಿಯಲ್ಲಿ ಪಂಚಾಯತಿಯಿಂದ ನನಗೆ ಮನೆ ಮಂಜೂರಾಗಿತ್ತು ಎಂದು ತಿಳಿಸಲು ನನಗೆ ತೊಂದರೆ ಇರಲಿಲ್ಲ. ಸದರಿ ಮನೆಯು ನನಗೆ 3-4 ವರ್ಷಗಳ ಹಿಂದೆ ಮಂಜೂರಾಗಿತ್ತು. ನನಗೆ ಸುಮಾರು 7-8 ವರ್ಷಗಳ ಹಿಂದೆ ಮನೆ ಮಂಜೂರಾಗಿತ್ತು ಎಂದರೆ ಸರಿಯಲ್ಲ.

2. ನನಗೆ ಇಬ್ಬರು ಮಕ್ಕಳು. ನನ್ನ ಮಗಳು ಮರಣವನ್ನು ಹೊಂದಿದ್ದಾಳೆ. ಕಾರಣ ಎದುರುದಾರರೇ ನನ್ನ ಮಗಳಿಗೆ ಶಾಲೆಯ ಬಳಿ ಹೊಡೆದಿದ್ದರಿಂದ ಬೇಸತ್ತು, ಆತ್ಮಹತ್ಯೆಯನ್ನು ಮಾಡಿಕೊಂಡಳು. ನನ್ನ ಮಗಳಿಗೆ ಸಾಯುವಾಗ 13-14 ವರ್ಷ ವಯಸ್ಸಾಗಿತ್ತು. ನಾನು ನನ್ನ ಅರ್ಜಿಯಲ್ಲಿ ನನ್ನ ಮಗಳು ಅನಾರೋಗ್ಯದಿಂದ ನನ್ನ ತವರು ಮನೆಯಲ್ಲಿ ಮರಣವನ್ನು ಹೊಂದಿರುತ್ತಾಳೆ ಎಂದು ಬರೆಸಿಲ್ಲ. ನನ್ನ ಅರ್ಜಿಯಲ್ಲಿ ಈಗ ಹೇಳಿದಂತೆ ಬರೆಸಿದ್ದೇನೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಅರ್ಜಿಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

3. ನಾನು ಶಾನುಭೋಗನಹಳ್ಳಿಯಲ್ಲಿ ಯಾವ ತಾರೀಖು, ತಿಂಗಳು ಮತ್ತು ಇಸವಿಯಿಂದ ವಾಸವಾಗಿದ್ದೇನೆ ಎಂದು ನನಗೆ ನೆನಪಿಲ್ಲ. ನನ್ನ ಮಗನ ಹೆಸರು ಲೋಕೇಶ. ಅವರು ಮುಂಚೆ ಕಾರ್ಖಾನೆಯಲ್ಲಿ ಕೆಲಸವನ್ನು ಮಾಡುತ್ತಿದ್ದು, ಈಗ ಅವರ

ಹೆಂಡತಿಯ ಮನೆಯಲ್ಲಿ ವಾಸವಾಗಿದ್ದಾನೆ. ಸಾಕ್ಷಿಗೆ ಈ ದಿನ ಒಂದು ಪೋಟೋವನ್ನು ತೋರಿಸಿ, ಅದರಲ್ಲಿ ಇರುವವರು ನಿಮ್ಮ ಮಗ ಎಂದರೆ, ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಅದನ್ನು ಈಗ **ನಿಡಿ.1** ಎಂದು ಗುರುತಿಸಲಾಯಿತು. ನಿಮ್ಮ ಮಗ ಮಲ್ಟೀಸ್ಪೇಷಾಲಿಟಿ ಆಸ್ಪತ್ರೆಯಲ್ಲಿ ಅಕೌಂಟೆಂಟ್ ಆಗಿ ಕೆಲಸವನ್ನು ಮಾಡುತ್ತಿದ್ದರು ಎಂದರೆ , ಸಾಕ್ಷಿಯು ಸ್ವಲ್ಪ ದಿನ ಮಾಾಡುತ್ತಿದ್ದರು ಎಂದು ನುಡಿಯತ್ತಾರೆ. ಈಗಲೂ ನನ್ನ ಮಗ ಸದರಿ ಸಂಸ್ಥೆಯಲ್ಲಿ ಕೆಲಸವನ್ನು ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ . ನನ್ನ ಮಗಳಿಗೆ ತಿಂಗಳಿಗೆ ರೂ.60,000 ರಿಂದ 70,000 ಸಂಪಾದನೆ ಬರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈ ದಿನ ಒಂದು ಪೋಟೋವನ್ನು ತೋರಿಸಿ, ಅದರಲ್ಲಿ ಇರುವ ಆಸ್ಪತ್ರೆಯಲ್ಲಿ ನಿಮ್ಮ ಮಗ ಕೆಲಸವನ್ನು ಮಾಡುತ್ತಿದ್ದಾರೆ ಎಂದರೆ, ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯತ್ತಾರೆ. ಹಾಗಾಗಿ ಅದನ್ನು ನಿಶಾನೆಗೊಳಿಸಲಿಲ್ಲ.

( **ಸಾಕ್ಷಿಯು ಎದುರುದಾರರ ಪಾಟೀ ಸವಾಲಿಗೆ ಸರಿಯಾಗಿ ಪ್ರಶ್ನೆ ಕೇಳಿಸಿಕೊಳ್ಳದೇ, ವ್ಯತಿರಿಕ್ತ ವಾಗಿ ನುಡಿದಿದ್ದರಿಂದ ಪಾಟೀ ಸವಾಲನ್ನು ಸಮಯ ಅವಕಾಶ ಇಲ್ಲದೇ ಮುಂದುಡಲಾಯಿತು.** )

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**1 ನೇ ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**